# ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ

3ನೇ ಮಹಡಿ, 5ನೇ ಹಂತ, ಬಹುಮಹಡಿ ಕಟ್ಟಡ, ಡಾ॥ ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು– 560001

ಸಂಖ್ಯೆ: ಮಾಹಆ 199 ಆಡಳಿತ 2024 ದಿನಾಂಕ 13/09/2024

## ಅಧಿಸೂಚನೆ

ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗಕ್ಕೆ ಮಂಜೂರಾದ ಈ ಕೆಳಕಾಣಿಸಿದ ಹುದ್ದೆಗಳಿಗೆ ಗುತ್ತಿಗೆ ಆಧಾರದ ಮೇಲೆ ತಾತ್ಕಾಲಿಕವಾಗಿ ನೇಮಕಾತಿ ಮಾಡಿಕೊಳ್ಳಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಈ ನೇಮಕಾತಿಯು ಪ್ರಥಮತಃ 6 ತಿಂಗಳ ಅವಧಿಗೆ ಅಥವಾ ನೇಮಕಾತಿಯಾದವರ ಸೇವೆಯು ತೃಪ್ತಿಕರವೆಂದು ಕಂಡುಬಂದಲ್ಲಿ ಪುನಃ ಮುಂದುವರೆಸುವುದು ಆಯೋಗದ ವಿವೇಚನೆಗೆ ಒಳಪಟ್ಟಿರುತ್ತದೆ.

**ಸೂಕ್ತ ಅಭ್ಯರ್ಥಿಗಳನ್ನು ಸಂದರ್ಶನದ ಮೂಲಕ ಆಯ್ಕೆ ಮಾಡಲಾಗುವುದು.**

| ಕ್ರ. ಸಂ | ಪದನಾಮ | ವೇತನ | ಹುದ್ದೆಗಳ ಸಂಖ್ಯೆ | ಅರ್ಹತೆ / ವಿದ್ಯಾರ್ಹತೆ ಮತ್ತು ಅನುಭವ |
|---|---|---|---|---|
| 1. | ಕಾನೂನು ಸಹಾಯಕರು / ಸಂಶೋಧನಾ ಸಹಾಯಕರು | ರೂ.33,450/- ಪ್ರತಿ ಮಾಹೆ | 02 | i. ಮಾನ್ಯತೆ ಪಡೆದ ಯಾವುದೇ ವಿಶ್ವವಿದ್ಯಾನಿಲಯದಿಂದ ಕಾನೂನು ಪದವಿ ಪಡೆದವರಾಗಿರಬೇಕು.<br>ii. ಎಲ್.ಎಲ್.ಎಂ ಪದವಿ ಹೊಂದಿದ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುವುದು.<br>iii. ಕಾನೂನು ಕ್ಷೇತ್ರದಲ್ಲಿ ಅನುಭವ ಹೊಂದಿರುವವರಿಗೆ ಆದ್ಯತೆ ನೀಡಲಾಗುವುದು.<br>iv. ಕನ್ನಡ ಮತ್ತು ಆಂಗ್ಲ ಭಾಷೆಗಳಲ್ಲಿ ಹಾಗೂ ಕಂಪ್ಯೂಟರ್ ವಿಷಯದಲ್ಲಿ ಕಾರ್ಯ ನಿರ್ವಹಿಸುವ ಅನುಭವ ಹೊಂದಿರಬೇಕು. |
| 2. | ವಾಹನ ಚಾಲಕರು | ರೂ.21,400/- ಪ್ರತಿ ಮಾಹೆ | 01 | i. 10ನೇ ತರಗತಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದವರಾಗಿರಬೇಕು.<br>ii. ಪ್ರಸ್ತುತ ಮಾನ್ಯತೆ ಪಡೆದ ಲಘು ಮೋಟಾರು ವಾಹನ ಚಾಲನಾ ಪರವಾನಗಿ ಹೊಂದಿರಬೇಕು.<br>iii. ಕನ್ನಡ ಓದುವ ಮತ್ತು ಬರೆಯುವ ಜ್ಞಾನ ಉಳ್ಳವರಾಗಿರಬೇಕು. |

ಈ ನೇಮಕಾತಿಗಳು ತಾತ್ಕಾಲಿಕವಾಗಿ ನಿಗದಿತ ಅವಧಿಗೆ ಅಥವಾ ಸರ್ಕಾರದಿಂದ ನಿಯೋಜನೆ ಮೇರೆಗೆ ಭರ್ತಿಯಾಗುವವರೆಗೆ ಅಥವಾ ಸರ್ಕಾರದಿಂದ ಕ್ರಮಬದ್ಧ

..2

ನೇಮಕಾತಿಯಾಗುವವರೆಗೆ ಅಥವಾ ಆಯೋಗದ ಮುಂದಿನ ಆದೇಶದವರೆಗೆ ಆಯೋಗದ ವಿವೇಚನೆಗೊಳಪಟ್ಟಿರುತ್ತವೆ.

**ಆಸಕ್ತಿ ಇರುವ ಅಭ್ಯರ್ಥಿಗಳು ನಿಗದಿತ ಪ್ರಪತ್ರದಲ್ಲಿ ಮುಚ್ಚಿದ ಲಕೋಟೆಯಲ್ಲಿ ಅಂಚೆ ಮೂಲಕ ಅಥವಾ ಇ–ಮೇಲ್ ಮೂಲಕ ದಿನಾಂಕ 30/09/2024 ರಂದು ಅಥವಾ ಅದಕ್ಕಿಂತ ಮುಂಚಿತವಾಗಿ ತಲುಪುವಂತೆ ಅರ್ಜಿಗಳನ್ನು ಸಲ್ಲಿಸಬಹುದು.** ಲಕೋಟೆಯ ಮತ್ತು ಅರ್ಜಿಯ ಮೇಲೆ **"_______________** ಹುದ್ದೆಗಾಗಿ ಅರ್ಜಿ**"** ಎಂದು ಸ್ಪಷ್ಟವಾಗಿ ನಮೂದಿಸಿರಬೇಕು. ಪ್ರಕಟಣೆಯ ಹಾಗೂ ಪ್ರಪತ್ರದ ವಿವರಗಳು ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗದ ಅಂತರ್ಜಾಲ www.kshrc.karnataka.gov.in ನಲ್ಲಿ ಲಭ್ಯವಿರುತ್ತದೆ. ಭರ್ತಿ ಮಾಡಿದ ಅರ್ಜಿಗಳನ್ನು ನೋಂದಾಯಿತ ಅಂಚೆ ಸ್ವೀಕೃತಿ ಬಾಕಿ ಅಥವಾ ತ್ವರಿತ ಅಂಚೆ ಅಥವಾ ಇ–ಮೇಲ್ ಮೂಲಕ ಕಳುಹಿಸಬಹುದು. ಇ–ಮೇಲ್ ಮೂಲಕ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಅರ್ಜಿ ಮತ್ತು ಸಂಬಂಧಿಸಿದ ಎಲ್ಲಾ ದಾಖಲೆಗಳನ್ನು ಒಂದೇ ಫೈಲ್ ನಲ್ಲಿ ಸ್ಕ್ಯಾನ್ ಮಾಡಿ, ಪಿಡಿಎಫ್ ಫಾರ್ಮೆಟ್ ನಲ್ಲಿಯೇ ಕಳುಹಿಸತಕ್ಕದ್ದು.

ಅರ್ಜಿಗಳನ್ನು ಕಳುಹಿಸಬೇಕಾದ ವಿಳಾಸದ ವಿವರಗಳು ಈ ಕೆಳಕಂಡಂತಿದೆ:

ಕಾರ್ಯದರ್ಶಿ
ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ
5ನೇ ಹಂತ, ಬಹುಮಹಡಿ ಕಟ್ಟಡ, 3ನೇ ಮಹಡಿ
ಡಾ॥ ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು – 560001
ಇ – ಮೇಲ್ ವಿಳಾಸ: secretary-kshrc@karnataka.gov.in.

13/09/24

ಕಾರ್ಯದರ್ಶಿ (ಪ್ರ)
ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ

# ನಿಗದಿತ ಪ್ರಪತ್ರ

| ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ |
|---|

**ಅರ್ಜಿ ಸಲ್ಲಿಸುವ ಹುದ್ದೆ:** ____________

**ವೈಯಕ್ತಿಕ ವಿವರಗಳು:**

| | |
|---|---|
| 1) ಅಭ್ಯರ್ಥಿಯ ಹೆಸರು | |
| 2) ತಂದೆ / ಪೋಷಕರ ಹೆಸರು | |
| 3) ಲಿಂಗ: ಗಂಡು/ ಹೆಣ್ಣು | |
| 4) ಜನ್ಮ ದಿನಾಂಕ (10ನೇ ತರಗತಿಯ ತೇರ್ಗಡೆ ಪ್ರಮಾಣ ಪತ್ರದ ಪ್ರತಿ ಲಗತ್ತಿಸಬೇಕು) | |
| 5) i. ಕಂಪ್ಯೂಟರ್ ವಿಷಯದಲ್ಲಿ ಕಾರ್ಯ ನಿರ್ವಹಿಸಿದ ಅನುಭವ ಹೊಂದಿರುವರೇ?<br>ii. ಕನ್ನಡ ಭಾಷೆಯಲ್ಲಿ ಕಾರ್ಯ ನಿರ್ವಹಿಸಿದ ಅನುಭವ ಹೊಂದಿರುವರೇ?<br>iii. ಇಂಗ್ಲೀಷ್ ಭಾಷೆಯಲ್ಲಿ ಕಾರ್ಯ ನಿರ್ವಹಿಸಿದ ಅನುಭವ ಹೊಂದಿರುವರೇ? | |
| 6) ವಿದ್ಯಾರ್ಹತೆ (ತೇರ್ಗಡೆ ಪ್ರಮಾಣ ಪತ್ರದ ಪ್ರತಿಗಳನ್ನು ಲಗತ್ತಿಸಬೇಕು) | |
| 7) ಹೆಚ್ಚುವರಿ ವಿದ್ಯಾರ್ಹತೆ (ತೇರ್ಗಡೆ ಪ್ರಮಾಣ ಪತ್ರದ ಪ್ರತಿಗಳನ್ನು ಲಗತ್ತಿಸಬೇಕು) | |
| 8) ಕಾರ್ಯ ನಿರ್ವಹಿಸಿದ ಅನುಭವ – ವರ್ಷಗಳಲ್ಲಿ (ವಿವರಗಳನ್ನು ಅನುಬಂಧೀಕರಿಸುವುದು) | |
| 9) ಪಠ್ಯೇತರ ಚಟುವಟಿಕೆಗಳ ವಿವರ | |
| 10) ನಿವಾಸದ ವಿಳಾಸ<br>(ಅ) ಖಾಯಂ ವಿಳಾಸ<br>(ಆ) ಪ್ರಸ್ತುತ ವಿಳಾಸ | |
| 11) ಮೊಬೈಲ್ ಸಂಖ್ಯೆ | |
| 12) ಇ– ಮೇಲ್ ವಿಳಾಸ | |

## ಘೋಷಣೆ

ಮೇಲೆ ಹೇಳಲಾದ ಮಾಹಿತಿಯು ಸರಿಯಾಗಿದೆಯೆಂದು ದೃಢೀಕರಿಸುತ್ತೇನೆ ಮತ್ತು ನಾನು ನೀಡಿದ ಮಾಹಿತಿಯೇನಾದರು ಸರಿಯಾಗಿಲ್ಲವೆಂದು ಕಂಡು ಬಂದಲ್ಲಿ, ನನ್ನ ಅರ್ಜಿಯು ಅಥವಾ ನೇಮಕಾತಿಯು ರದ್ದುಪಡಿಸಲು ಬಾಧ್ಯವಾಗಿರುತ್ತದೆ.

ಸ್ಥಳ:

ದಿನಾಂಕ: **ಅರ್ಜಿದಾರರ ಸಹಿ & ಹೆಸರು**